**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ.**

ಸಿ.ಸಿ. ನಂ.33/2023

CW-9/PW-8

| | | |
|---|---|---|
| ಹೆಸರು | : | ಸಮಿವುಲ್ಲಾ |
| ತಂದೆ ಹೆಸರು | : | ಷಪೀವುಲ್ಲಾ |
| ವಯಸ್ಸು | : | 38 ವರ್ಷ |
| ವೃತ್ತಿ | : | ಚಿನ್ನ ಬೆಳ್ಳಿ ಪಾಲಿಶ್ ವ್ಯಾಪಾರ |
| ವಾಸ ಸ್ಥಳ | : | ಯಾರಬ್ ನಗರ, ರಾಮನಗರ ಟೌನ್ |
| ದಿನಾಂಕ | : | 30-10-2025. |

ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ಸಾಕ್ಷಿ ನಿಪಿ 5 ರಲ್ಲಿ ತಮ್ಮ ಸಹಿಯನ್ನು **ನಿಪಿ 5(ಬಿ)** ಎಂದು ಗುರುತಿಸಿರುತ್ತಾರೆ. ಎರಡು ವರ್ಷಗಳ ಹಿಂದೆ ರಾಮನಗರ ಗ್ರಾಮಾಂತರ ಪೊಲೀಸರು ಚಿನ್ನದ ಒಡವೆಗಳನ್ನು ಪರಿಶೀಲನೆ ಮಾಡುವ ಸಲುವಾಗಿ ಕರೆಸಿದ್ದರು. ಆ ಪೊಲೀಸ್ ಠಾಣೆಯಲ್ಲಿ ಎರಡು ಎಳೆ ಚಿನ್ನದ ಚೈನ್, ಎರಡು ಕಾಸುಗಳು, ಎರಡು ಗುಂಡು ಮತ್ತು ಒಂದು ಚಿನ್ನದ ತಾಳಿಯನ್ನು ಪರಿಶೀಲನೆ ಮಾಡಿ ಅವುಗಳು ಚಿನ್ನದ ಒಡವೆಗಳಾಗಿರುತ್ತವೆ ಎಂದು ದೃಡಪಡಿಸಿರುತ್ತೇನೆ. ಆ ಕಾಲಕ್ಕೆ ಪೊಲೀಸರು ಪೊಲೀಸ್ ಠಾಣೆಯಲ್ಲಿ ಮಹಜರ ಮಾಡಿದರು. ಆ ಒಡವೆಗಳನ್ನು ನೋಡಿದರೆ ಗುರುತಿಸಬಲ್ಲೆ. ಸದರಿ ಒಡವೆಗಳ ಪೊಟೋವನ್ನು ಈಗ ನೋಡುತ್ತಿದ್ದೇನೆ. ಪೊಟೋವನ್ನು ಈಗಾಗಲೇ ನಿಪಿ 3 ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಬೇರೆ ಯಾರೂ ಇರಲಿಲ್ಲ. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯನ್ನು ನಾನು ನೋಡಿಲ್ಲ.

(ಮಾನ್ಯ ಎ.ಪಿ.ಪಿ. ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಯನ್ನು ನೀಡಲಾಯಿತು.)

<u>ಸಿ.ಸಿ. ನಂ.33/2023ರಲ್ಲಿ</u>
CW-9/PW-8

<u>ಪಾಟೀ ಸವಾಲು ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-</u>

ದಿನಾಂಕಃ 08.03.2023ರಂದು ರಾಮನಗರ ಟೌನ್ ನ ಕುಮಾರಸ್ವಾಮಿ ಲೇಔಟ್ ನಲ್ಲಿರುವ ಭಾಗ್ಯಮ್ಮರವರ ಮೂರು ಹಂತಸ್ತಿನ ಮೇಲ್ಭಾಗದ ಟೆರೇಸ್ ನಲ್ಲಿ ಸೋಲಾರ ಟ್ಯಾಂಕ್ ಬಳಿ ನ್ಯಾಯಾಲಯದ ಮುಂದಿರುವ ಆರೋಪಿಯು ಅವರ ತಾಯಿ ಶಾಂತಮ್ಮರವರು ಮಲಗಿದ್ದಾಗ ಅವರ ಕತ್ತಿನಲ್ಲಿದ್ದ ಚಿನ್ನದ ಎರಡು ಎಳೆಯ ಮಾಂಗಲ್ಯ ಸರವನ್ನು ಕಿತ್ತುಕೊಂಡು ವಾಸದ ಬಾಡಿಗೆ ಮನೆಯ ಮೇಲ್ಭಾಗದ ಟೆರೇಸ್ ನಲ್ಲಿ ಸೋಲಾರ ಟ್ಯಾಂಕ್ ಕಳಗಡೆ ಮುಚ್ಚಿಟ್ಟಿದ್ದು ಅದನ್ನು ಆರೋಪಿಯು ಪೊಲೀಸರನ್ನು ಹಾಗೂ ನಮ್ಮನ್ನು ಕರೆದುಕೊಂಡು ಹೋಗಿ ಪೊಲೀಸರ ಮುಂದೆ ಹಾಜರುಪಡಿಸಿದಾಗ ನಿಪಿ 5 ಮಹಜರ ನ್ನು ಸ್ಥಳದಲ್ಲೇ ಬರೆಯಲಾಯಿತು ಅಂದರೆ ಸರಿ.

<u>ಪಾಟೀ ಸವಾಲು ಆರೋಪಿ ಪರ ಶ್ರೀ ಡಿ ಎಸ್ ಎಸ್ ವಕೀಲರಿಂದಃ-</u>

ನಿಪಿ 5 ಮಹಜರ ನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ, ಪೊಲೀಸ್ ಠಾಣೆಯಲ್ಲಿ ನಿಪಿ 5 ಕ್ಕೆ ಸಹಿ ಮಾಡಿದ್ದೆ ಅಂದರೆ ಸರಿ. ಪೊಲೀಸರು ನನಗೆ ಯಾವುದೇ ಚಿನ್ನದ ಸರ, ಗುಂಡು ಮತ್ತು ತಾಳಿಯನ್ನು ಪರಿಶೀಲನೆ ಮಾಡಲು ಕೊಟ್ಟೇ ಇಲ್ಲ, ನಾನು ಪರಿಶೀಲನೆ ಮಾಡೇ ಇಲ್ಲ ಅಂದರೆ ಸರಿಯಲ್ಲ. ನಾನು ಪೊಲೀಸರ ಮಾತು ಕೇಳಿ ಬಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.